

ಕುಂಡೆ ಹಬ್ಬ ಮೆರವಣಿಗೆಗೆ ಹೊರಟ ಆದಿವಾಸಿ ತಂಡ



ದೇವರಪುರ ಅಯ್ಯಪ್ಪ ದೇವಸ್ಥಾನದ ಮುಂಭಾಗ



ಹಿಂದೆಲ್ಲ ವಾರಗಟ್ಲೆ ಹಬ್ಬ ನಡಿಯೂದು. ಆಗೆಲ್ಲ ವೇಷ ಹಾಕೋರತ್ರ ಕತ್ತಿ ಕೋಲು ಇರೋದು. ನಂತ್ರ ಅವರವರೊಳಗೇ ದುಶ್ಮನಿಯಿಂದ ಹೊಡೆದಾಟ ಬಡಿದಾಟ! ಪ್ರತಿಹಬ್ಬದಾಗೆ ಕುಂಡೆ ವೇಷ ಹಾಕೋರ ಒಂದೊಂದು ಹೆಣ ಉರುಳೋದು. ಇಂಥವೆಲ್ಲ ನಡೀಕೂಡದಂತ ಇತ್ತೀಚೆಗೆಲ್ಲ ಕುಂಡೆ ಹಬ್ಬಾನ ಎರಡು ದಿನಕ್ಕೆ ಇಳಿಸವ್ರೆ. ಮಲೆಜನಗಳು ಮಾತ್ರವಲ್ಲ, ಬೇರೆಯವ್ರೂ ಕಾಸು ಮಾಡೋಕೆ ವೇಷ ಹಾಕುತ್ತಾರೆ. ಅವರೆಲ್ಲ ಅಯ್ಯಪ್ಪ–ಭದ್ರಕಾಳಿ ದೇವ್ರ ನಂಬಿ ಬರೋರಲ್ಲ'.

**–ಬೆಟ್ಟಕುರುಬರ ಮಣಿ**, ದೇವರಪುರ



ಭದ್ರಮ್ಮನ ವಿಗ್ರಹದ ನಾಲ್ಗೆಗೆ ಮೊಳೆ ಹೊಡದ್ರಂತೆ. ಆಮ್ಯಾಲಿಂದ ಆ ದೇವೀಮಾತೆ ಮ್ಯಾಲಿಂದ ಮ್ಯಾಗೆ ಮನುಸ್ರ ತಿನ್ನಾದು ನಿಲ್ಲಿಸ್ತು''.

## ಹಬ್ಬದ ಅಸಲಿ ಗಮ್ಮತ್ತು

ದೇವರಪುರ ಭದ್ರಕಾಳಿ ದೇವಸ್ಥಾನದಲ್ಲಿ ಹಬ್ಬಕ್ಕೆ ಚಾಲನೆ ಸಿಕ್ಕಾದ ಮೇಲೆ ಮರುಬೆಳಗಿಂದ ಕುಂಡೆ ಹಬ್ಬದ ಅಸಲಿ ಗಮ್ಮತ್ತು ಶುರು. ಅಂದು ಹಾದಿ ಮೆರವಣಿಗೆ. ಆ ಮೆರವಣಿಗೆಯಲ್ಲಿ ನಾಗರಹೊಳೆ, ಪಿರಿಯಾಪಟ್ಟಣ, ಕುಶಾಲನಗರ, ಮಡಿಕೇರಿ, ವಿರಾಜಪೇಟೆ ಕಡೆಗಳಿಂದೆಲ್ಲ ಕೊಡಗಿನ ಆದಿಪಂಗಡಗಳು ಭಾಗಿಯಾಗುತ್ತವೆ. ಜೇನುಕುರುಬರು, ಮಲೆಕುಡಿಯರು, ಬೆಟ್ಟಕುರುಬರು, ಯರವರು ಹಾಗೂ ಫಣಿಯರು ತಮ್ಮ ಕೃಷ್ಣವರ್ಣದ ಮೈಗೆಲ್ಲಾ ಬೆಳ್ಳಿ ಬಣ್ಣ ಲೇಪಿಸಿ ಸಿಂಗಾರಗೊಳ್ಳುವರು. ಅಂದು ಸೆಲೆಬ್ರಿಟಿ ಕಳೆ ಆದಿವಾಸಿಗಳನ್ನು ಆವರಿಸಿಕೊಳ್ಳುತ್ತದೆ.

ಮನುಷ್ಯನ ಸುಪ್ತ ಲಾಲಸೆ, ರತಿ ಮನ್ಮಥರ ಆಧುನಿಕ ಅವತಾರ–ಆಡಂಬರ, ವೈವಿಧ್ಯಮಯ ಬೈಗುಳಗಳು ಮೆರವಣಿಗೆಯಲ್ಲಿ ಸಾರ್ವಜನಿಕವಾಗಿ ವ್ಯಕ್ತಗೊಳ್ಳುವುದು ಈ ಹಬ್ಬದ ವಿಶೇಷ. ಈ ಮೂಲಕ ಹಬ್ಬದಲ್ಲಿ ಪಾಲ್ಗೊಳ್ಳುವವರು ತಮ್ಮ ಮನದೊಳಗಿನ ನಂಜು, ಒಳಗುದಿಗಳನ್ನು ಕಳೆದುಕೊಂಡು ನಿರಾಳವಾಗುವರು.

ಠುಸ್‌ಪುಸ್ ಇಂಗ್ಲಿಷ್ ಮಾತನಾಡುವ ಮಾಡರ್ನ್ ಲೇಡಿ, ಠಕ್ಕು ಸಂನ್ಯಾಸಿ, ಸೇಠ್‌ಜೀಯ ಮೋಸದ ವಹಿವಾಟು– ಹೀಗೆ ಅನೇಕ ವೇಷಗಳು ಹಬ್ಬದ ಸ್ವಾರಸ್ಯ ಹೆಚ್ಚಿಸುತ್ತವೆ. ಅಸಾಂಪ್ರದಾಯಿಕ ಸಂಗೀತ ಪರಿಕರಗಳ ಬಡಿತವೂ ಹಬ್ಬದ ಸಂಭ್ರಮ ಹೆಚ್ಚಿಸುತ್ತವೆ. ಮಲೆವಾಸಿಗಳು ತಮ್ಮ ನೃತ್ಯಕ್ಕೆ ಟಿನ್ನು, ಪ್ಲಾಸ್ಟಿಕ್ ಡಬ್ಬ, ಬಕೀಟು, ಡ್ರಮ್ಮು, ಬ್ಯಾಂಡ್, ಸೋರೆಬುರುಡೆ, ಢಕ್ಕೆ ಮುಂತಾದವುಗಳನ್ನು ಲಯಬದ್ಧವಾಗಿ ಬಳಸುತ್ತಾ 'ಹೋಹೈ' ಅಂತ ಹುಯಿಲು ಎಬ್ಬಿಸುವುದನ್ನು ನೋಡಿದಾಗ ನೋಡುಗರಿಗೂ ಎರಡು ಸ್ಟೆಪ್ಪು ಹಾಕುವ ಹುಮ್ಮಸ್ಸು ಮೂಡುತ್ತದೆ. ವೇಷಧಾರಿಗಳು ಅಂಗಡಿ ಮುಂಗಟ್ಟುಗಳ ಬಳಿ ತಮ್ಮ ಪಾತ್ರದ ಪ್ರಶಂಸೆಗಾಗಿ ಸಂಭಾವನೆ ಕೇಳುತ್ತಾ, ಕಾಸು ಕೊಡದಿದ್ದರೆ, 'ನಾ ನಿಂಗೆ ಇಷ್ಟವಾಗಿಲ್ವ... ನಾ ಚೆಂದಕೆ ಇಲ್ವಾ?' ಅಂತ ಹುಸಿಮುನಿಸಾಡುವರು. ಆ ಹೊತ್ತು ದೊಡ್ಡ ಎಸ್ಟೇಟ್ ಪ್ಲಾಂಟರ್ ಮನೆಗೆ ಹೋದರೆ ಪಾತ್ರಧಾರಿಗಳಿಗೆ ಸುಖಾಸುಗ್ಗಿ. ಹೃದಯವಂತ ಎಸ್ಟೇಟ್ ಓನರುಗಳು ಹಬ್ಬದ ನೆಪದಲ್ಲಿ ಆದಿವಾಸಿಗಳಿಗೆ ಹೊಟ್ಟೆಬಿರಿಯುವಷ್ಟು ಮದಿರೆ ಹಾಗೂ ಬಾಡೂಟ ನೀಡುವುದಿದೆ.

ಕುಂಡೆ ಹಬ್ಬ ಎರಡು ದಿನ ನಡೆಯುವುದು– ಆರಂಭದ ಒಂದು ರಾತ್ರಿ, ನಂತರದ ಎರಡು ಹಗಲು. ಕೊನೇ ದಿನ ಸಂಜೆ ಕೊಡಗಿನ ವಿವಿಧೆಡೆಯಿಂದ ಮೆರವಣಿಗೆ ಸಾಗಿದ್ದ ಕುಂಡೆ ವೇಷಗಳು ವಿರಾಜಪೇಟೆಯ ಗೋಣಿಕೊಪ್ಪಕ್ಕೆ ಬಂದು, ದೇವರಪುರದ ಅಯ್ಯಪ್ಪ ದೇವಸ್ಥಾನದ ಮುಂಭಾಗ ಜಮಾಯಿಸುತ್ತಾರೆ. ಅಲ್ಲಿ ಅನಾವರಣಗೊಳ್ಳುವ ಹಾಡು, ಮಾತು, ಬೈಗುಳ, ಕುಣಿತ... ಅದೆಲ್ಲವನ್ನೂ ನೋಡಿಯೇ ಅನುಭವಿಸಬೇಕು.

ದೇವರಪುರದ ಅಯ್ಯಪ್ಪ ದೇವರ ಆಲಯದ ಮುಂದೆ ಬೃಹತ್ ಆಲದ ಮರವಿದೆ. ಅದರಡಿ 'ಅಜ್ಜ' ಎಂಬ ದೈವಗಣ ನೆಲೆ ನಿಂತಿದೆ. ಅದರೆದುರು ಕುಂಡೆ ಹಬ್ಬದಲಿ ಪಾಲುಗೊಂಡ ಹರಕೆ ಹೊತ್ತವರು ಕೋಳಿಯನ್ನು ಆಗಸಕ್ಕೆ ಎಸೆಯುವರು. ಗಾಳಿಗೆ ಹಾರಿ ಚದುರಿದ ಹರಕೆ ಕೋಳಿ ಹಿಡಿದವರು ಪುಣ್ಯವಂತರು ಎಂಬುದು ನಂಬಿಕೆ. ಹಾದಿ ಮೆರವಣಿಗೇಲಿ ತಾವು ಬೇಡಿ ತಂದ ಕಾಸಲ್ಲಿ ಒಂದು ಭಾಗವನ್ನು ದೈವಗಣಕ್ಕೆ ಆದಿವಾಸಿಗಳು ಒಪ್ಪಿಸುತ್ತಾರೆ. 'ಹಬ್ಬದಲಿ ತನ್ನಿಂದ ತಪ್ಪು ನಡೆದಿದ್ದರೆ ಕ್ಷಮಿಸು' ಎಂದು ದೇವರ ಬಳಿ ಪ್ರಾರ್ಥಿಸುವರು. ಈ ಮೂಲಕ ಕುಂಡೆ ಹಬ್ಬ ಕೊನೆಗೊಳ್ಳುವುದು.

ಪ್ರತಿಕ್ರಿಯಿಸಿ: feedback@sudha.co.in